# ಸರಗಳ ಸಿರಿಯಲ್ಲಿ...!

ಚಿನ್ನದ ಸರ ಎಂದರೆ ಆಭರಣಪ್ರಿಯರಿಗೆ ಎಲ್ಲಿಲ್ಲದ ಮೋಹ. ಸರಗಳಲ್ಲಿ ಅದೆಷ್ಟು ಬಗೆ, ವಿನ್ಯಾಸ!. ಸರಗಳ ಲೋಕದಲ್ಲಿ ಒಮ್ಮೆ ಸರಸರನೆ ಹೊಕ್ಕು ಬಂದರೆ ಇದರ ವೈವಿಧ್ಯದ ಅರಿವಾಗಬಹುದು. ರೇಡಿಯೊ ಸರ, ಸಚಿನ್ ಸರ, ಸ್ವಾತಿ ಸರ, ಅಶ್ವಿನಿ ಸರ, ಕನಕಮಾಲೆ, ಕೇಶವಾಭರಣ... ಅಬ್ಬಬ್ಬಾ ಒಂದೇ ಎರಡೇ..!

**■ ಕೃಷ್ಣವೇಣಿ ಪ್ರಸಾದ್ ಮುಳಿಯ**

ಚಿತ್ರಕೃಪೆ: ಮುಳಿಯ ಕೇಶವ ಭಟ್ & ಸನ್ಸ್



ಶೃಂಗಾರದಲ್ಲಿ ಅತಿ ಪ್ರಾಮುಖ್ಯವಾದವು ಆಭರಣ. ಇದರ ಜೊತೆಗೆ ಕೇಶಾಲಂಕಾರ, ಮಂಗಲ ದ್ರವ್ಯಗಳ ಬಳಕೆ, ಪಾದರಕ್ಷೆ, ಕೈಚೀಲ ಎಲ್ಲವೂ ಚೆನ್ನಾಗಿರಬೇಕು ಒಂದಕ್ಕೊಂದು ಹೊಂದಿಕೊಂಡಿರಬೇಕು. ಶೃಂಗಾರ ಎನ್ನುವುದು ಬದುಕಿನಲ್ಲಿ ಅತ್ಯಂತ ಪ್ರಿಯ ಹಾಗೂ ಮನಸ್ಸಿಗೆ ಆಹ್ಲಾದವನ್ನು ಕೊಡುವಂತಹದ್ದು.

ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿರುವ ಆಭರಣ ಸರಗಳು. ಸದಾ ಕತ್ತಲ್ಲಿ ಮಿನುಗುವ ಒಂದು ಸರ ಮಕ್ಕಳಿಗೂ ಚೆನ್ನ. ಇಂದು ಯುವತಿಯರು ಸರಳವಾದ ಆಭರಣ ಇಷ್ಟಪಡುತ್ತಾರೆ. ಪುಟ್ಟದಾದ ಕಿವಿಯೋಲೆ ಅದಕ್ಕೊಪ್ಪುವ ಒಂದು ತೆಳ್ಳಗಿನ ಸರ ಮಧ್ಯದಲ್ಲಿ. ಮಿನುಗುವ ಕಿವಿಯೋಲೆಯನ್ನು ಹೋಲುವ ಒಂದು ಪೆಂಡೆಂಟ್ ಸಾಕು, ಸಿಂಪಲ್ ಆಗಿ ಸಮಾರಂಭಗಳಿಗೂ ಹಾಗೆ ತೆರಳುವವರು ಇದ್ದಾರೆ.

## ಚಿನ್ನದ ಸರಗಳ ಆಯ್ಕೆ ಹೇಗೆ?

- ಹಿತವಾಗಿ ಚರ್ಮಕ್ಕೊಪ್ಪುವ ವಿನ್ಯಾಸ
- ಹೊಳಪಿನ ವಿನ್ಯಾಸ
- ದೀರ್ಘಕಾಲ ಬಾಳಿಕೆ ಬರುವ ವಿನ್ಯಾಸ
- ಅಲಂಕಾರಕ್ಕೆ ಯೋಗ್ಯವಾದ ವಿನ್ಯಾಸ

## ರೇಡಿಯೊ ಸರ

ಇದು ಆಯತಾಕಾರದ ಬಾಕ್ಸ್‌ಗಳನ್ನು ಜೋಡಿಸಿದಂತಿರುತ್ತದೆ. ಬಹಳ ಹೊಳಪು ಇದ್ದು ಎಂದೆಂದೂ ಹಳತಾಗದ ಸರ ಇದು. 18 ಇಂಚಿನ ಸರಕ್ಕೆ 6 ಗ್ರಾಂ ಸಾಕು. ಹ್ಯಾಂಡ್ ಮೇಡ್ ತಗಡನ್ನು ಮಾಡಿ ಮಡಚಿ ಬಾಕ್ಸ್ ಮಾಡಿ ರೂಪ ಕೊಡುವಂತಹದ್ದು. ಪ್ರತಿದಿನ ಧರಿಸಿದರೂ 50 ವರುಷಕ್ಕಿಂತಲೂ ಹೆಚ್ಚು ಬಾಳಿಕೆ ಬಂದ ಉದಾಹರಣೆ ಇದೆ. ಇದಕ್ಕೆ ದೊಡ್ಡದಾದ ಒಂದೇ ಒಂದು ಸ್ಫಟಿಕದ, ಹವಳದ, ಮುತ್ತಿನ ಸಣ್ಣ ಪೆಂಡೆಂಟ್ ಬಹಳ ಚಂದ.

## ಚಕ್ರ ಸರ (ಪ್ರೆಸ್ ಚೈನ್)

ತಗಡನ್ನು ಚಕ್ರಾಕಾರದಲ್ಲಿ ಕತ್ತರಿಸಿ ಒಂದಕ್ಕೊಂದು ಬೆಸೆದಂತಹ ಸರ. ಇದು ಹೊಳಪು ಮಾಸುವುದಿಲ್ಲ. 3 ಸುತ್ತು , 2 ಸುತ್ತಾಗಿ ಧರಿಸಿದರೂ ಚೆನ್ನ. ಪೆಂಡೆಂಟ್ ಬಳಸಿ ಧರಿಸುವುದು ಕಡಿಮೆ. 2 ಗ್ರಾಂನಿಂದ ಪ್ರಾರಂಭವಾಗಿ ಅವರವರ ಇಚ್ಛಾನುಸಾರ ಗ್ರಾಂನ್ನು ಹೊಂದಿಸಿದರಾಯಿತು. ಮಕ್ಕಳ ಸರ ಸೊಗಸು. ಹೆಂಗಳೆಯರ 3 ಎಳೆ ಸರಕ್ಕೆ 24ಗ್ರಾಂ ಇದ್ದರೂ ಸಾಕಾಗುತ್ತದೆ.

## ಅಶ್ವಿನಿ ಸರ

ಇದು ಚಿನ್ನದ ಕುಶಲ ಕರ್ಮಿಗಳು ಸ್ವತಃ ಕೈಯಿಂದಲೇ ತಯಾರು ಮಾಡುವ ಸರ ಮಧ್ಯದಲ್ಲಿ ಗಾಳಿ ಆಡುವಂತಿದ್ದರೂ ಪಂಜರದಂತೆ ಕಾಣಿಸುವ ಸಣ್ಣ ಕಿಂಡಿಗಳನ್ನು ಒಳಗೊಂಡ ಸರ ಇದು. ಉದ್ದವಾದ 32 ಇಂಚು ಇದ್ದು ದೊಡ್ಡ ಪೆಂಡೆಂಟನ್ನು ಧರಿಸಿದಾಗ ಬಹಳ ವೈಭವೋಪೇತವಾಗಿ ಕಾಣಿಸಿಕೊಳ್ಳುತ್ತದೆ.

## ಕೇಶವಾಭರಣ ಸರ

ಇದು ಒಂದು ಬಹಳ ಪ್ರಸಿದ್ಧವಾದ ಸರ. ಇದು ಕಾಣಲು ಬಹಳ ಅಂದವಾಗಿದ್ದು ಒಂದಕ್ಕೊಂದು ಒಳಗೆ ಒಳಗೆ ಬೆಸೆದಂತೆ ಸರಿಗೆಗಳು ಇದ್ದು ಸದೃಢವಾಗಿದೆ. ಜೊತೆಗೆ ಬಹಳ ನುಣುಪಾಗಿರುತ್ತದೆ. ಕತ್ತಿನಲ್ಲಿ ಧರಿಸಿದ ಆಭರಣಕ್ಕೆ ಪೆಂಡೆಂಟ್‌ನ ಅಗತ್ಯವಿಲ್ಲ. ಇದನ್ನು ಸಾಧಾರಣವಾಗಿ ನಿತ್ಯ ಬಳಕೆಗೆ ಬಳಸುತ್ತಾರೆ.

## ಕನಕ ಮಾಲೆ